ಶ್ರೀ ಎಚ್. ಎಂ. ಚನ್ನಬಸಪ್ಪ.—ಲೆಫ್ಟ್ ಬ್ಯಾಂಕಿನ ಲೆಫ್ಟ್ ಬಾಗದಲ್ಲಿ ಪರ್ವತ ಶ್ರೇಣಿಗಳ ರುವುದರಿಂದ ಕುಪುದ್ಯತಿ ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ಬಹಳ ರಾಂಗ್ ರೇಂಜ್ ಹಿಡಿಯುತ್ತದೆ. ಅದರ ಹೈಟ್ 150 ರಿಂದ 300-350 ಅಡಿಯ ವರೆಗೂ ಹೋಗಬೇಕಾಗುತ್ತದೆ. 300 ಅಡಿ ಆ ಕಾಲದಲ್ಲಿ ಫೀಸಿಬಲ್ ಆಗಿಲ್ಲವೆಂದು ಇತ್ತು. ಈಗ ಈ ಏತ ನೀರಾವರಿ ಸ್ವಲ್ಪಮಟ್ಟಿಗೆ ವಿಕಾಲವಾಗಿರುವುದರಿಂದ 300-350 ಅಡಿ ವರೆಗೂ ವಿಸ್ತರಿಸಬಹುದೆಂದು ಕಾಣುತ್ತದೆ. ಅದನ್ನು ಹೊನರ್ದಾಗಿ ಪರಿಶೀಲನೆ ಮಾಡಿ ಬೆಟ್ಟದ ಗುಡ್ಡದ ಆಚೆ ನೀರು ಕೊಡುವುದು ಸಾಧ್ಯವೇ ಎಂಬುದನ್ನು ಯೋಜನೆ ಮಾಡುತ್ತೇವೆ.

RATIO OF STAFF ON T.B. BOARD

59. Sri B. SATHYANARAYANA SINGH (Hospet).—

Will the Minister of State for Major Irrigation be pleased to state:—

(*a*) the reasons for constituting the Tungabhadra Board;

(*b*) whether it is a fact that the Secretary, Tungabhadra Board is the only person who represents Government of India at Tungabhadra Dam Head Works;

(*c*) whether any staff ratio was agreed to between Andhra and Mysore States with regard to this Board; if so, whether it is maintained at Head Works and in Bellary Division?

Sri H. N. NANJE GOWDA (Minister of State for Major Irrigation).—

(*a*) The Board is constituted by the Government of India under the provisions of the Andhra State Act, 1953, for the purpose of completion of the Tungabhadra Project and its operation and maintenance.

(*b*) The Secretary of the Board does not represent the Government of India on the Board.

(*c*) The Tungabhadra Board on the Irrigation side has tentatively fixed the staff ratio as 50:50 between Andhra Pradesh and Mysore in respect of Class III posts, *i.e*, Technical and Ministerial staff. The Board has also decided that in case one of the States is not in position to depute, the vacancy should be filled up from the other participating States.

This is being maintained at Head Works and in Bellary District but where there is delay in getting the candidates from the participating States against their quota in respect of the Board's request available candidates are being utilised as a stop gap arrangement in the interest of the works till the candidates from the respective States are posted against their quota.

ಶ್ರೀ ಬಿ. ಸತ್ಯನಾರಾಯಣಸಿಂಗ್.—(ಸಿ)ಯಲ್ಲಿ ತಾತ್ಕಾಲಿಕವಾಗಿ 50:50 ಪ್ರಮಾಣದಲ್ಲಿ ರೇಶಿಯೋ ಗೊತ್ತುಮಾಡಲಾಗಿದೆ ಎಂದ ಹೇಳಿದ್ದೀರಿ. ಇದನ್ನು ತಾತ್ಕಾಲಿಕವಾಗಿ ಏಕೆ ಗೊತ್ತು ಮಾಡಲಾಗಿದೆ ; ಮತ್ತು ಕೇವಲ ಮೈಸೂರಿಗೆ 50 ಪರ್ಸೆಂಟ್ ಏಕೆ ಗೊತ್ತು ಮಾಡಲಾಗಿದೆ ಮತ್ತು ಈ ಅಣೆಕಟ್ಟು ಕೆಲಸದ ಮಟ್ಟಿಗೆ ಒಂದು ಪರ್ಮನೆಂಟ್ ಏರ್ಪಾಡು ಮಾಡುವ ಬಗ್ಗೆ ತಾವು ಏನಾದರೂ ಆಲೋಚನೆ ಮಾಡಿದ್ದೀರಾ ?

†ಶ್ರೀ ಎಚ್. ಎನ್. ನಂಜೇಗೌಡ.—ಇದು ಮೂರನೆಯ ದರ್ಜೆಯ ನೌಕರಿಗೆ ಸಂಬಂಧ ಪಟ್ಟದ್ದು. ಇದರ ಜೊತೆಗೆ ಖಾಯಂ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳಿದ್ದಾರೆ. ಈ ಬೋರ್ಡನ್ನೇ ಅಬಾಲಿಷ್ ಮಾಡತಕ್ಕದ್ದು ನೂಕ್ತ ಎನ್ನತಕ್ಕ ತೀರ್ಮಾನವನ್ನು ಕೈಗೊಂಡು ನಾವು ಭಾರತ ಸರ್ಕಾರದೊಡನೆ ವ್ಯವಹರಿಸುತ್ತಾ ಇದ್ದೇವೆ ಈ ಕಾರಣದಿಂದ ಬೋರ್ಡನ್ನೇ ಅಬಾಲಿಷ್ ಮಾಡಿದ ಮೇಲೆ ಜೇರೆ ಏರ್ಪಾಡನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ತುಂಗಭದ್ರಾ ಬೋರ್ಡಿನವರು ವರ್ಕ್ ಚಾರ್ಜ್ಡ್ ಮತ್ತು ಎನ್. ಎಂ. ಆರ್. ನಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವಾಗ ಮೈಸೂರು ಕೋಟಾದಲ್ಲಿ ಸಹ ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದ್ದಾರೆ. ಅಲ್ಲದೆ ಮೈಸೂರು ರಾಜ್ಯದಲ್ಲಿ ವರ್ಕ್ ಚಾರ್ಜ್ಡ್‌ನವರಿಗೆ ಸಿಗತಕ್ಕ ಸೌಲಭ್ಯಗಳನ್ನು ಸೆಕ್ರಟರಿಯವರು ಅಲ್ಲಿ ಕೊಡುತ್ತಾ ಇಲ್ಲ. ಇದರ ಬಗ್ಗೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ಎನ್. ನಂಜೇಗೌಡ.—ಈಗ ತಾನೇ ಸದಸ್ಯರು ಅದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಅಂದಾನಯ್ಯ.—ತಾವು ತುಂಗಭದ್ರಾ ಬೋರ್ಡನ್ನು ಅಬಾಲಿಷ್ ಮಾಡುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದ ಪತ್ರಕ್ಕೆ ಏನಾದರೂ ಉತ್ತರ ಬಂದಿದೆಯೇ ; ಬರದಿದ್ದರೆ ಅದಕ್ಕೆ ಒಂದು ರಿಮೈಂಡರ್ ಕಳಿಸಿ ಉತ್ತರ ತರಿಸುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ನವಂಬರ್ 65 ರಂದು ನಾವು ಒಂದು ಪತ್ರ ಬರೆದು ಅದನ್ನು ಅಬಾಲಿಷ್ ಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಿದ್ದೇವೆ. ಆಗ ಹೈಲೆವೆರ್ ಕೆನಾರ್ ಕೆಲಸ ಮುಗಿದಿರಲಿಲ್ಲ. ಅದು ಆದನಂತರ ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದರು. ಮತ್ತೆ 1970ನೇ ಇಸವಿ ಜುಲೈ ಮತ್ತು 1971ನೇ ಇಸವಿ ಜುಲೈನಲ್ಲಿ ಎರಡು ಸಾರಿ ನಾವು ಒತ್ತಾಯ ಮಾಡಿದ್ದೇವೆ ಆಗ ಅವರು ಪತ್ರ ಮುಖೇನ ಸ್ವಲ್ಪ ಕಾರಾ ನಂತರ ಅದನ್ನು ಪರಿಶೀಲನೆ ಮಾಡೋಣ ಎಂದು ಹೇಳಿದ್ದರು. ನಾನು ಮೊನ್ನೆ ದಹಲಿಗೆ ಹೋದಾಗ ಈ ಬಗ್ಗೆ ನಾನು ಡಾ॥ ರಾವ್ ಅವರ ಹತ್ತಿರ ಒತ್ತಾಯ ಪೂರ್ವಕವಾಗಿ ಇದು ಸರಿಯಿಲ್ಲ, ಯಾವ ಉದ್ದೇಶಕ್ಕಾಗಿ ಈ ತುಂಗಭದ್ರಾ ಬೋರ್ಡನ್ನು ಸ್ಥಾಪನೆ ಮಾಡಲಾಗಿತ್ತೋ ಆ ಉದ್ದೇಶ ಈಗ ಮುಗಿದಿದೆ. ಆದ್ದರಿಂದ ಆ ಬೋರ್ಡನ್ನು ಅಬಾಲಿಷ್ ಮಾಡಬೇಕೆಂದು ಹೇಳಿದ್ದೇನೆ. ಆಗ ಅವರು ಹೇಳಿದರು. ಈಗ ಕೃಷ್ಣಾ ನದಿಯ ನೀರಿನ ಹಂಚಿಕೆಯ ವಿವಾದ ಟ್ರಿಬ್ಯುನಲ್ ಮುಂದೆ ಇದೆ. ಆದ್ದರಿಂದ ಆ ತೀರ್ಮಾನ ಆಗುವವರೆಗೂ ಕಾದು ಆ ತೀರ್ಮಾನ ಬಂದ ನಂತರ ಈ ಬಗ್ಗೆ ಏನು ಮಾಡಬೇಕೆಂಬುದನ್ನು ಚರ್ಚಿಸಿ ಈ ಬೋರ್ಡನ್ನು ಅಬಾಲಿಷ್ ಮಾಡುವ ಬಗ್ಗೆ ತೀರ್ಮಾನ ಮಾಡೋಣ ಎಂದು ಹೇಳಿದ್ದಾರೆ. ಈ ಮಟ್ಟದಲ್ಲಿ ಆ ವ್ಯವಹಾರ ಇದೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ತುಂಗಭದ್ರಾ ಬೋರ್ಡಿನಲ್ಲಿ ಕಳೆದ 24 ವರ್ಷಗಳಿಂದ ಸೇವೆ ಸಲ್ಲಿಸಿರುವ 14 ಮಂದಿ ನೌಕರರನ್ನು ಕಾನೂನಿಗೆ ವಿರೋಧವಾಗಿ ಅವರನ್ನು ಕೆಲಸದಿಂದ ತೆಗೆದಿದ್ದಾರೆ. ಇದನ್ನು ತಪ್ಪು ಗಮನಕ್ಕೆ ತಂದಿದ್ದೇನೆ ಮತ್ತು ಸರ್ಕಾರದ ಗಮನಕ್ಕೂ ತಂದಿದ್ದೇನೆ. ಈ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಸದಸ್ಯರು ಅದನ್ನು ಸರ್ಕಾರದ ಗಮನಕ್ಕೆ ತಂದಿರುವುದು ನಿಜ. ಆದರೆ ಅದು ಯಾವ ಸ್ಟೇಜಿನಲ್ಲಿದೆ ಎಂಬುದನ್ನು ಈಗ ಹೇಳುವುದಕ್ಕೆ ನೋಟೀಸ್ ಬೇಕು.